1301(1590) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಜಮೀನು ಖರೀದಿ ಯೋಜನೆ ಯಡಿಯಲ್ಲಿ ಜಮೀನಿನ ಬೆಲೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜಮೀನು ಏರಿಕೆಯ ಬೆಲೆಗೆ ಅನುಗುಣವಾಗಿ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ;

ಆ) ಹಾಗಿದ್ದಲ್ಲಿ, ಹೆಚ್ಚಳಗೊಂಡ ಹಣವನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂರಹಿತ ಕೃಷಿ ಕಾರ್ಮಿಕರಿಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನನ್ನು ಘಟಕ ವೆಚ್ಚ ರೂ. 60,000/–ದಂತೆ ಖರೀದಿಸಿ ನೀಡಲಾಗುತ್ತಿದೆ. ಇದರಲ್ಲಿ ಶೇ. 50 ಸಹಾಯಧನ ಶೇ.50 ಸಾಲದ ರೂಪದಲ್ಲಿರುತ್ತದೆ. ಜಮೀನಿನ ಬೆಲೆಯು ಹೆಚ್ಚಳವಾಗಿರುವುದನ್ನು ಮನಗಂಡು ಸರ್ಕಾರದ ಆದೇಶದ ಸಂಖ್ಯೆ: ಸಕಇ 42 ಎಸ್‌ಡಿಸಿ 04, ದಿನಾಂಕ: 06–06–06ರಲ್ಲಿ ಘಟಕ ವೆಚ್ಚವನ್ನು ಮಾರ್ಪಡಿಸಿ ರಾಜ್ಯದ ಪ್ರತಿಯೊಂದು ಹಳ್ಳಿಗಳಿಗೆ ನೋಂದಣಿ ಇಲಾಖೆಯಲ್ಲಿ ನಿಗದಿ ಪಡಿಸಿರುವ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಜಮೀನನ್ನು ಖರೀದಿಸಲು 2006–07ನೇ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರವು ಮಂಜೂರಾತಿ ನೀಡಿದೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರವು ಭೂ ಒಡೆತನ ಯೋಜನೆಯ ಅನುಷ್ಠಾನಕ್ಕಾಗಿ ಪರಿಶಿಷ್ಟ ಜಾತಿಗೆ ರೂ. 10.00 ಕೋಟಿ, ಪರಿಶಿಷ್ಟ ವರ್ಗಕ್ಕೆ ರೂ. 3.00 ಕೋಟಿ ಹಣವನ್ನು ನಿಗಧಿ ಪಡಿಸಿದೆ. ನಿಗಮದಿಂದ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಆ) ಭೂ ಒಡೆತನ ಯೋಜನೆಯಡಿ ಘಟಕ ವೆಚ್ಚವನ್ನು ಸರ್ಕಾರಿ ಆದೇಶ ಸಂಖ್ಯೆ: ಸಕಇ 42 ಎಸ್‌ಡಿಸಿ 04, ದಿನಾಂಕ : 06–06–06ರಲ್ಲಿ ರಾಜ್ಯದ ಪ್ರತಿಯೊಂದು ಹಳ್ಳಿಗಳಿಗೆ ನೋಂದಣಿ ಇಲಾಖೆಯಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಜಮೀನನ್ನು ಖರೀದಿಸಲು 2006–07ನೇ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರವು ಮಂಜೂರಾತಿ ನೀಡಿದೆ. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣವನ್ನು ಸರ್ಕಾರಿ ಆದೇಶ 06–06–06ರಂತೆ 2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ 2507 ಪರಿಶಿಷ್ಟ ವರ್ಗದ 805 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು

ಕ್ರಿಯಾ ಯೋಜನೆ ರೂಪಿಸಿದೆ. ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಪ್ರಸ್ತಾವನೆಗಳನ್ನು ಕಳುಹಿಸಲು ಜಿಲ್ಲಾ ಸಮಿತಿಗಳಿಗೆ ತಿಳಿಸಲಾಗಿದೆ. ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಪಡೆದು ನಿಗಮದಿಂದ ಮಂಜೂರಾತಿ ನೀಡಲಾಗುವುದು.

1302(1670) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉದ್ಯೋಗ ಇಲಾಖೆಯ ಉಪ ನಿರ್ದೇಶಕರ ವಿರುದ್ಧ ಲೋಕಾಯುಕ್ತರು ಅಕ್ರಮ ಆಸ್ತಿ ಹಾಗೂ ಭ್ರಷ್ಟಾಚಾರ ಪ್ರಕರಣದ ಹಿನ್ನೆಲೆಯಲ್ಲಿ ಸೇವೆಯಿಂದ ವಜಾಗೊಳಿಸಲು ದಿ: 3.8.2005 ರಂದು ಶಿಫಾರಸ್ಸು ಮಾಡಿದಾಗ್ಯೂ, ಅವರ ವಿರುದ್ಧ ಕ್ರಮಕೈಗೊಳ್ಳದೆ ವಿಳಂಬ ನೀತಿ ಅನುಸರಿಸಿ ರಕ್ಷಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಹಾಗಿದ್ದಲ್ಲಿ, ಇವರನ್ನು ವಜಾ ಗೊಳಿಸದೇ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಇಲ್ಲಿಯವರೆಗೆ ಉಂಟಾದ ನಷ್ಟ ಎಷ್ಟು;

ಈ) ಈವರೆವಿಗೂ, ಲೋಕಾಯುಕ್ತರಿಂದ ಶಿಕ್ಷೆಗೆ ಶಿಫಾರಸ್ಸುಗೊಂಡಿದ್ದರೂ ಶಿಕ್ಷೆಗೊಳಗಾಗದೆ ನಿವೃತ್ತರಾದ ಅಧಿಕಾರಿಗಳ ಸಂಖ್ಯೆ ಎಷ್ಟು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಉಪಲೋಕಾಯುಕ್ತ ಇವರನ್ನು ಸೇವೆಯಿಂದ ವಜಾ ಮಾಡಲು ಶಿಫಾರಸ್ಸು ಮಾಡಿದೆ. ಈ ಪ್ರಕರಣವು ಪರಿಶೀಲನೆಯಲ್ಲಿದ್ದು ಅಂತಿಮ ಹಂತದಲ್ಲಿದೆ.

ಆ) ಉಪಲೋಕಾಯುಕ್ತರ ವಿಚಾರಣಾ ವರದಿ ಅವರ ಶಿಫಾರಸ್ಸಿನೊಂದಿಗೆ ದಿ: 6.8.2005 ರಂದು ಸ್ವೀಕರಿಸಿದೆ. ನಿಯಮಾನುಸರ 2ನೇ ಕಾರಣ ಕೇಳುವ ನೋಟೀಸನ್ನು ಮತ್ತು ವಿಚಾರಣಾ ವರದಿಯೊಂದಿಗೆ ಶ್ರೀ ಸಿ.ಎಲ್. ಕಿತ್ತೂರು, ಉಪನಿರ್ದೇಶಕರು ಮತ್ತು ಶ್ರೀಮತಿ ಖಿತೇಜ ಫೈರೋಜ್, ಉದ್ಯೋಗಾಧಿಕಾರಿ ಇವರಿಗೆ ದಿ: 26.11.2005ರಂದು ಜಾರಿ ಮಾಡಿದೆ. ಶ್ರೀಮತಿ ಖಿತೇಜ ಫೈರೋಜ್ ರವರಿಂದ ದಿ: 7.12.2005 ಮತ್ತು ಶ್ರೀ ಸಿ.ಎಲ್. ಕಿತ್ತೂರ್ ರವರಿಂದ ದಿ: 19.12.2005 ರಂದು ಉತ್ತರ ನೀಡಿರುತ್ತಾರೆ. ಇವರುಗಳ ಉತ್ತರದ ಆಧಾರದ ಮೇಲೆ ಈ ಪ್ರಕರಣವನ್ನು ಪರಿಶೀಲಿಸಲಾಗುತ್ತಿದೆ ಮತ್ತು ಪ್ರಕರಣ ಅಂತಿಮ ಹಂತದಲ್ಲಿದೆ.

ಇ) ಅನ್ವಯಿಸುವುದಿಲ್ಲ.

ಈ) ಇಲ್ಲ.